ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-5, Special Issue-1, Sep-Oct, 2023, Pp.42-47.**
**©IIMRD, Mysuru.**

IIMRD JOURNALS
**www.iimrd.com**

# ಕೋಲಾರ ಜಿಲ್ಲೆಯ ಚಾರಿತ್ರಿಕ ಸ್ಥಳನಾಮಗಳು: ಒಂದು ಅಧ್ಯಯನ

**ಪ್ರೊ. ರಾಧಮ್ಮ ಕೆ. ಸಿ.***

*ಮುಖ್ಯಸ್ಥರು ಹಾಗೂ ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಕೆ.ಸಿ.ರೆಡ್ಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಂಗಾರಪೇಟೆ

***ಸಾರಾಂಶ: (Abstract)***

*ಕೋಲಾರ ಜಿಲ್ಲೆ ಸಾಂಸ್ಕೃತಿಕವಾಗಿ ಬಾಳಿ ಬದುಕಿದ ಜನರ ನೋವು–ನಲಿವು, ಸುಖ–ದುಃಖ, ಆಚಾರ–ವಿಚಾರ ರೀತಿ–ನೀತಿಗಳನ್ನು, ಹಬ್ಬ–ಹರಿದಿನ, ಜಾತ್ರೆ–ಉತ್ಸವಗಳು ಒಂದು ಸಮುದಾಯದ ಸಾಂಸ್ಕೃತಿಕ ಪರಂಪರೆ ಸಂಕೇತಗಳು. ಅನಾದಿ ಕಾಲದಿಂದಲೂ ಪೂರ್ವಿಕರ ರೂಢಿಸಿಕೊಂಡು ಬಂದಿರುವ ಜನಪದ ಕಲೆ ಹಾಗೂ ಸಾಂಸ್ಕೃತಿಕ ಉತ್ಸವಗಳನ್ನು ಎಂದು ನಾವು ಅತ್ಯಂತ ಶ್ರದ್ಧೆ ಮತ್ತು ಭಕ್ತಿ ವೈಭವದಿಂದ ಆಚರಿಸಿಕೊಂಡು ಬಂದಿರುವುದು ನಿಜಕ್ಕೂ ಹೆಮ್ಮೆಯ ಸಂಕೇತ. ಇದನ್ನು ತಿಳಿಯಬೇಕಾದರೆ ಶಾಸನ ಸಾಹಿತ್ಯದ ಜೊತೆಗೆ ಜನಪದ ಇತಿಹಾಸ ಇಲ್ಲಿನ ಸ್ಥಳೀಯ ಸ್ಥಳಗಳ ಮಹತ್ವ ಮುಖ್ಯವಾಗಿರುತ್ತದೆ. ಜನರಾಡುವ ಮನಸ್ಸಿನ ಮಾತಿನ ನಾಲಿಗೆಯಲ್ಲಿ ನಿಂತು ಕಂಠಸ್ಥ ಸಂಪ್ರದಾಯವಾದ ಮೌಖಿಕ ಪರಂಪರೆ ಉಳಿದು ಬೆಳೆದು ಬಂದಿರುವ ಬಗೆ ಇತಿಹಾಸದ ಪುಟಗಳಲ್ಲಿ ಕಾಣಬಹುದು. ಹಾಗೆಯೇ ಕೋಲಾರ ಜಿಲ್ಲೆಗೆ ಸೇರಿದಂತಹ ಸ್ಥಳನಾಮಗಳ ಚರಿತ್ರೆ ಸಾಕಷ್ಟಿವೆ. ಅವು ಅನೇಕ ಬಗೆಯ ವೈಜ್ಞಾನಿಕ ಸತ್ಯಗಳನ್ನು ಸ್ಥಳನಾಮಗಳು ಹೇಗೆ ಹುಟ್ಟಿಕೊಂಡವು ಎಂಬುದರ ಬಗ್ಗೆ ಭೌಗೋಳಿಕ, ಧಾರ್ಮಿಕ, ಜಾನಪದೀಯ, ಐತಿಹಾಸಿಕ, ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಅಂಶಗಳು ಯಾವ ರೀತಿ ಪ್ರಭಾವ ಬೀರುತ್ತವೆ ಎಂಬುದನ್ನು ಕೋಲಾರ ಜಿಲ್ಲೆಯ ಪ್ರಸ್ತುತ ತಾಲೂಕುಗಳ ಕೇಂದ್ರಗಳಲ್ಲಿ ಕಂಡುಬಂದಿದೆ.*

***ಮುಖ್ಯಪದಗಳು (Keywords)*** *ಜನಪದ, ಸ್ಥಳನಾಮಗಳು, ಶಾಸನ ಸಾಹಿತ್ಯ, ರಾಜಕೀಯ, ಸಂಗೀತ, ಕಲೆ.*

## ಪೀಠಿಕೆ

ಕೋಲಾರ ಜಿಲ್ಲೆಯಲ್ಲಿ ತುಂಬಿ ಹರಿಯುವ ನದಿಗಳಿಲ್ಲದಿದ್ದರೂ ಚಿನ್ನ ಬೆಳೆಯುವಂತಹ ಫಲವತ್ತತೆಯ ಮಣ್ಣಿದೆ. ಈ ಮಣ್ಣಿನ ವಾಸನೆ ರೇಷ್ಮೆ, ಹಾಲು, ಕೃಷಿ ಕ್ಷೇತ್ರದಲ್ಲಿ ಗಣನೀಯ ಪ್ರಗತಿ ಕಂಡಿದೆ. ಅನೇಕ ಸಾಮ್ರಾಜ್ಯಗಳು ಬಾಣರು, ಗಂಗರು, ಕಂಚಿ ಪಲ್ಲವರು, ಚೋಳರು, ಚೇರರು ವಿಜಯನಗರ ಸಾಮ್ರಾಜ್ಯ, ವಿವಿಧ ಪಾಳ್ಯ–ಪಟ್ಟುಗಳು, ಬಿಜಾಪುರದ ಆದಿಲ್ ಶಾಹಿಗಳು, ಮೊಘಲರು, ಮರಾಠರು, ಕಡಪಾದ ನವಾಬರು, ಹೈದರಾಲಿ, ಟಿಪ್ಪು, ಮೈಸೂರಿನ ಸಂಸ್ಥಾನದವರು, ಕಮಿಷನರುಗಳು, ದಿವಾನರು ವೈಭವದಿಂದ ಆಳ್ವಿಕೆ ನಡೆಸಿದ್ದಾರೆ. ಇವರ ಕಾಲದಲ್ಲಿ ನಿರ್ಮಿಸಿರುವ ಗುಡಿ–ಗೋಪುರಗಳು, ಕೋಟೆ–

*Please cite this article as:* ಪ್ರೊ. ರಾಧಮ್ಮ ಕೆ. ಸಿ. (2023). ಕೋಲಾರ ಜಿಲ್ಲೆಯ ಚಾರಿತ್ರಿಕ ಸ್ಥಳನಾಮಗಳು: ಒಂದು ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ.42–47.*

ಕೊತ್ತಲಗಳು, ಕೆರೆ–ಕುಂಟೆಗಳು ಜಿಲ್ಲೆಯನ್ನು ಐತಿಹಾಸಿಕವಾಗಿ ಶ್ರೀಮಂತಗೊಳಿಸಿವೆ. ಕೋಲಾರ, ಕುರುಡುಮಲೆ, ಕೊಲ್ದೇವಿ, ಮುಳಬಾಗಿಲು, ವಿರೂಪಾಕ್ಷಿ, ಬಂಗಾರ ತಿರುಪತಿ, ಚಿಕ್ಕತಿರುಪತಿ, ಟೇಕಲ್, ಬೂದಿಕೋಟೆ ಮುಂತಾದ ಐತಿಹಾಸಿಕ ಸ್ಥಳಗಳು ಆರು ತಾಲೂಕುಗಳಾಗಿ ವಿಂಗಡಣೆಗೊಂಡಿದ್ದು; ಬಂಗಾರಪೇಟೆ, ಕೆ.ಜಿ.ಎಫ್, ಮಾಲೂರು, ಕೋಲಾರ, ಶ್ರೀನಿವಾಸಪುರ, ಮುಳಬಾಗಿಲು. ಇವು ಆಂಧ್ರ, ತಮಿಳುನಾಡು ಗಡಿ ಪ್ರದೇಶಗಳಲ್ಲಿ ಇರುವುದರಿಂದ ಭಾಷಾ ವೈವಿಧ್ಯತೆ ಆಯಾ ಪ್ರದೇಶದ ಸಂಸ್ಕೃತಿ ಮತ್ತು ನಾಗರಿಕತೆಯ ಜೀವಂತ ಕಲಿಕೆ ಪಳಿಯುಳಿಕೆಗಳು ಈ ಭಾಗಗಳಲ್ಲಿ ಕಂಡುಬಂದಿದೆ.

ಕೋಲಾರ ಜಿಲ್ಲೆಯ ಭಾಷೆ ಕನ್ನಡ. ಆದರೆ ಇತರ ಭಾಷೆಗಳ ಪ್ರಭಾವದಿಂದ ತೆಲುಗು ಮಿಶ್ರಿತ ಕನ್ನಡ, ತಮಿಳು ಮಿಶ್ರಿತ ಕನ್ನಡ ಭಾಷೆಯನ್ನು ಮಾತನಾಡುತ್ತಿರುವ ಜನರು ಚಾರಿತ್ರಿಕ ವಿಧಾನಗಳಲ್ಲಿ ಮೂಲ ಆಕಾರಗಳಿಂದ ಅಗತ್ಯ ಮಾಹಿತಿಗಳ ಸಂಗ್ರಹಣೆ ಮೂಲಕ ಭಾಷೆ ಬಳಕೆ ಗುಣದೋಷಗಳ ಪರೀಕ್ಷೆ ಮತ್ತು ಸ್ಥಳನಾಮಗಳನ್ನು ಅರ್ಥಗರ್ಭಿತವಾಗಿ ಚರ್ಚಿಸುವ ಸಹಜ ಜ್ಞಾನ, ಮುಂದಾಲೋಚನೆ, ಕಲ್ಪನೆ ಮುಂತಾದವು ಸ್ಥಳನಾಮಗಳ ಮುಖಾಂತರವಾಗಿದೆ ಹಾಗೂ ಚಾರಿತ್ರಿಕ, ಭೌಗೋಳಿಕ ಹಾಗೂ ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಗಳಲ್ಲಿ ಬಳಸಬಹುದಾಗಿದೆ. ಇಲ್ಲಿ ವ್ಯಕ್ತಿನಾಮಗಳು ನೈಸರ್ಗಿಕ ಜಲ, ಶಿಲೆ, ಅಡವಿ, ಭೂಮಿ, ವೃಕ್ಷ, ಪಶು–ಪಕ್ಷಿ, ಕ್ರಿಮಿ–ಕೀಟಗಳು, ಜಾತಿ–ಜನಾಂಗ ಮುಂತಾದವುಗಳಲ್ಲಿ ಸ್ಥಳನಾಮಗಳನ್ನು ಕಾಣಬಹುದು. ಕೋಲಾರ ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಮಾತ್ರ ಹರಿಯುವ ನದಿಗಳಾದ ಉತ್ತರ ಪೆನ್ನಾರ್, ದಕ್ಷಿಣ ಪೆನ್ನಾರ್, ಪಾಲಾರ್, ಚಿತ್ರವತಿ, ಕುಮುದ್ವತಿ, ಪಾಪಘ್ನಿ, ಕುಶಾವತಿ, ಅರ್ಕಾವತಿ ಇವು ನದಿಯ ಜಲಮೂಲಗಳು. ಜೊತೆಗೆ ಸಣ್ಣ ಮತ್ತು ದೊಡ್ಡ ಕೆರೆಗಳಿದ್ದು 31 ಜಲ ಸೂಚಕ ಅಂಶಗಳುಳ್ಳ ಸ್ಥಳನಾಮಗಳು ಕಂಡುಬಂದಿವೆ.

ಕುಂಟೆ, ಕೊಳ, ಕೊಡಿ, ಕೆರೆ ಇವುಗಳನ್ನು ಚೆರುವು, ದೊರೆ, ವುಡ್ಡು, ಸಂದ್ರ, ಸಮುದ್ರ ಕಾಣಬಹುದು. ಹಾಗೆ ಕೆಂಬೋಡಿ, ಕೋಲಾರ, ಕೋಲ್, ಗೋಲ್, ದೇವಿ ಇವುಗಳನ್ನು ಕೊಲದೇವಿ ಶ್ರೀನಿವಾಸಪುರಗಳಲ್ಲಿ ಕಾಣಬಹುದು. ಧೋಣಿ, ದೋಣ ಇವುಗಳನ್ನು ಬಂಡಳ್ಳಿ, ಮುಳಬಾಗಿಲು ಎಲ್ಲಾ ಜನ ಸೂಚಕ ಸ್ಥಳನಾಮಗಳು.

ಕೋಲಾರ ಜಿಲ್ಲೆ ಕಾಡು ಮತ್ತು ಬೆಟ್ಟಸಾಲು ಪ್ರದೇಶಗಳಿಂದ ಆವೃತವಾಗಿರುವ ಬಂಗಾರಪೇಟೆ ಟೇಕಲ್, ಕುರುಡುಮಲೆ, ಚೆಂಜಿಮಲೆ, ಗುಟ್ಪಲ್ಲಿ, ಅಂತರಗಂಗೆ, ತೇರಹಳ್ಳಿ, ಖಾಜಿಹಳ್ಳಿ, ಬೆಟ್ಟಸಾಲು, ನೂಟವೇ ಬೆಟ್ಟಸಾಲುಗಳು ಊರಿನ ಹೆಸರಿನ ಮುಂದೆ ಗಿರಿ, ಪರ್ವತ, ದುರ್ಗಗಳ ಹೆಸರುಗಳನ್ನು ಒಳಗೊಂಡಿದೆ. ಮರ, ಗಿಡ ಹೆಸರಿನೊಂದಿಗೆ ಸೂಚಿಸುವ ಸ್ಥಳನಾಮಗಳೆಂದರೆ ಎಕ್ಕದೊಡ್ಡಿ, ಮಾಲೂರು, ಸೀಗೆಪಾಳ್ಯ, ಶ್ರೀನಿವಾಸಪುರ, ಹೂವಳ್ಳಿ ಕೋಲಾರ, ಹುಂಗೆನಳ್ಳಿ, ಮಾಲೂರು ಮುಂತಾದವುಗಳನ್ನು ಕಾಣಬಹುದು. ಪಶು–ಪಕ್ಷಿ, ಕೀಟಗಳನ್ನು ಸೂಚಿಸುವ ಸ್ಥಳನಾಮಗಳು ಎಮ್ಮೆನತ್ತ, ಮುಳಬಾಗಿಲು, ಡೇಗಲಮರ್ರಿ, ಶ್ರೀನಿವಾಸಪುರ, ನರಿನತ್ತ, ಬಂಗಾರಪೇಟೆ ಮುಂತಾದವುಗಳನ್ನು ಕಾಣಬಹುದು.

ಭೂಸ್ಥಿತಿಯ ಸ್ಥಳನಾಮಗಳು ಉಪ್ಪುಕುಂಟೆ, ಚೌಟಕುಂಟೆ, ಮರಳು ಕುಂಟೆ, ಸುದ್ದು ಕುಂಟೆ, ಸುನ್ನಪ್ ಕುಂಟೆ ದೇವರಗಳ ಹೆಸರಿನಲ್ಲಿ ಸೋಮೇಶ್ವರ ರಂಗಸ್ಥಳ. ಈ ಸ್ಥಳ ರಾಮೇಶ್ವರ, ಲಕ್ಷ್ಮಿಪುರ, ಶ್ರೀ ಮಂಗಳ, ರಾಮಸಾಗರ, ಎಗುವ ಕೋಟೆ, ದಿಗಪಲ್ಲಿ, ನಡೆಂಪಲ್ಲಿ, ಕೀಲಗಣಿ, ಮೇಲತಾಯಿಲೂರು ಕಾಣಬಹುದು.

ಪುರಾಣ ಹೆಸರುಗಳನ್ನು ಸೂಚಿಸುವ; ಹೊಸೂರು, ಹಳೆಹಳ್ಳಿ, ಪಾತಪಾಳ್ಯ, ಕೊತ್ತಕೋಟ, ಪಿಲ್ಲಗುಟ್ಟ, ಪೆದ್ದೂರು ಕುದುರೆ ಪಾಳ್ಯ, ಕಿತ್ತಂಡೂರು. ಸಂಖ್ಯಾ ಅಂಕಿಗಳನ್ನು ಸೂಚಿಸುವ ಒಂಟೆಮನೆಹಳ್ಳಿ, ಒಂಟೂರು, ಮೂರು ಮೇನಹಳ್ಳಿ. ವರ್ಣ ಸೂಚಕಗಳಾದ; ಕೆರೆ ಕಲ್ಲಹಳ್ಳಿ, ಕೆಂಚನಹಳ್ಳಿ, ಚಂಜಿಮಲೆ, ಜಪ್ತಿ ಹೊಸಹಳ್ಳಿ, ದುಂಡುಪಾಳ್ಯ ಜಪ್ತಿ ಮಾಡುವ ಹೆಸರುಗಳಾಗಿವೆ. ವಾಸ್ತುಶಿಲ್ಪ ಸೂಚಕಗಳಾದ; ಗುಡಿಪಲ್ಲಿ, ಗುಡಿಸಹಳ್ಳಿ, ಗಂಧೂಡಿಹಳ್ಳಿ ವಿಭೂತಿಪುರ ಗೇರುಪುರ ಮುಂತಾದವು. ಜಾತಿ ಬುಡಕಟ್ಟುಗಳ ಹೆಸರುಗಳು ಕೋಲಾರದ ಸ್ಥಳನಾಮಗಳಲ್ಲಿ ಹೆಚ್ಚಾಗಿ ಕಂಡುಬಂದಿವೆ. ಇವೆಲ್ಲವೂ ಬಹುತೇಕ ತೆಲುಗುವಿನ ಮೂಲವಾಗಿದ್ದು ಜಿಲ್ಲೆಯ ಗಡಿ ತಾಲೂಕುಗಳಲ್ಲಿ ಕಂಡುಬಂದಿದೆ.

ಮಾಲೂರು ತಾಲೂಕಿನಲ್ಲಿ ಉಪ್ಪಾರಹಳ್ಳಿ, ವಡ್ಡರಳ್ಳಿ, ಕೊರಚನೂರು, ಬಿಚ್ಚಗುಂಟಪಲ್ಲಿ, ಗೊಲ್ಲಹಳ್ಳಿ ಕುಂಬಾರಹಳ್ಳಿ, ಕುರುಬರಹಳ್ಳಿ, ಪಿಂಜಾರಲಹಳ್ಳಿ. ಬಂಗಾರಪೇಟೆ ತಾಲೂಕಿನಲ್ಲಿ ಬೋಯಿತಿನಹಳ್ಳಿ, ಹಾರೋಹಳ್ಳಿ ವಕ್ಕಲೇರಿ. ಕೋಲಾರ ತಾಲೂಕಿನಲ್ಲಿ ಬೆಸಕಲಪಲ್ಲಿ. ಶ್ರೀನಿವಾಸಪುರ ತಾಲೂಕಿನಲ್ಲಿ ಕಂಸವಾರಪಲ್ಲಿ. ಮುಳಬಾಗಿಲು ತಾಲೂಕಿನಲ್ಲಿ ಕುರುಬರಹಳ್ಳಿ, ಗೊಲ್ಲಹಳ್ಳಿ, ಕಂಸವಾಳಪಲ್ಲಿ, ಕಿಚ್ಚುಗುಂಡ ಹಳ್ಳಿಗಳನ್ನು ಕಾಣಬಹುದು. ಭಾಷೆ ಜನಾಂಗ ಅಥವಾ ಮತವನ್ನು ಹೆಸರಿಸುವ ಕೆಲವು ವಿಶಿಷ್ಟ ಸ್ಥಳನಾಮಗಳನ್ನು ಕಾಣಬಹುದಾಗಿದೆ; ಪಂತನಹಳ್ಳಿ, ಬಂಗಾರಪೇಟೆ, ಯಶವಂತಪುರ, ಮಾಲೂರು, ಶಾಪೂರು ಕೋಲಾರ, ಬೌರಿಂಗ್ ಪೇಟೆ, ರಾಬರ್ಸನ್ ಪೇಟೆ, ರೋಲಿಂಗ್ಸ್‌ಪುರ, ಶ್ರೀನಿವಾಸಪುರ, ಅರಾಬಿ ಕೊತ್ತನೂರು ಕೋಲಾರ ಲಾಲ್ಪುರ, ಇನ್ನೂ ಅನೇಕ ಸ್ಥಳಗಳು ಕಂಡುಬರುತ್ತವೆ.

ರಾಜಕೀಯ ಹಾಗೂ ಚಾರಿತ್ರಿಕವಾಗಿ ಕಳೆದು ಹೋದ ರಾಜಮನೆತನಗಳ ಪಾಳೆಗಾರರ ಕೆಲವು ಹೆಸರುಗಳನ್ನು ನೆನಪಿಸುವ ಸ್ಥಳನಾಮಗಳು ಕಂಡುಬರುತ್ತವೆ. ಕೋಲಾರ ಜಿಲ್ಲೆಯನ್ನು ಆಳಿದ ಗಂಗರು ನಂತರ ನೊಳಂಬರು, ಚೋಳರು, ಹೊಯ್ಸಳರು, ವಿಜಯನಗರ ಅರಸರು, ಮುಸಲ್ಮಾನ ದೊರೆಗಳ ಆಡಳಿತಕ್ಕೊಳಪಟ್ಟಿತ್ತು. ವಿವಿಧ ಕಾಲಘಟ್ಟದಲ್ಲಿ ಸ್ವತಂತ್ರರಾದ ಅನೇಕ ಪಾಳೆಗಾರರು ಈ ಪ್ರದೇಶಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಪ್ರದೇಶದ ಹೆಸರುಗಳೆಂದರೆ; ಕಂಗ ಅಂದರೆ ಗಂಗ, ನಲ್ಲೂರು ಬೇತ ವಿಜ್ಯದಿತ್ಯಮಂಗಲ, ಬಂಗಾರಪೇಟೆ, ನೊಣಳಬಮಂಗಲ, ಶಿವಾರ ಪಟ್ಟಣ, ಮಾಲೂರು ಮುಂತಾದ ಸ್ಥಳಗಳಲ್ಲಿ ಅರಸರು, ಅಧಿಕಾರಿಗಳು ತಮ್ಮ ನೆಚ್ಚಿನ ಹೆಸರುಗಳನ್ನು ನಾಮಕರಣ ಮಾಡಿರುವುದು ಕಂಡುಬರುತ್ತದೆ.

ಪ್ರಕೃತಿ ವಿಕೋಪಗಳಿಂದ ಕೋಟೆ–ಕೊತ್ತಲಗಳು, ದೇವಾಲಯಗಳು ನೆಲಸಮವಾದರೂ ಜನಸಾಮಾನ್ಯರ ಬಾಯಿಯಲ್ಲಿ ಸ್ಥಳನಾಮಗಳು ಅಳಿಸಿರುವುದಿಲ್ಲ. ರಾಜಕೀಯ ಕಾರಣದಿಂದ ಬೇರೊಂದು ಭಾಷೆಯನ್ನು ಜನರ ಮೇಲೆ ಏರಬಹುದು. ಆದರೆ ಜನವಸತಿಯು ಕಾಲ ಕಾಲಕ್ಕೆ ಬೇರೆ ಬೇರೆ ಆಡಳಿತಕ್ಕೆ ಒಳಪಡಬಹುದು, ಪುನರ್ ನಾಮಕರಣಗಳಾಗಬಹುದು, ಸಾಂಸ್ಕೃತಿಕರಣವಾಗಬಹುದು ಇವೆಲ್ಲವೂ ಮೀರಿ ಸ್ಥಳನಾಮಗಳು ಜೀವಂತ ಪಳೆಯುಳಿಕೆಗಳಾಗಿವೆ.

ಸ್ಥಳನಾಮಗಳ ಹುಟ್ಟು ಮತ್ತು ಬೆಳವಣಿಗೆ ನಿನ್ನೆ ಮೊನ್ನೆದಲ್ಲ. ಅನಾದಿಕಾಲದಿಂದಲೂ ಮಾನವ ಹುಟ್ಟಿನೊಂದಿಗೆ ಬೆಳೆದು ಬಂದಿದ್ದು. ಮಾನವನ ಜೀವನ ವಿಸ್ತಾರವಾದಂತೆಲ್ಲಾ ಭೌಗೋಳಿಕ, ಐತಿಹಾಸಿಕ

ಜನಪದೀಯ, ಪುರಾಣ ಮತ್ತು ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ಸ್ಥಳಗಳು ಊರುಗಳ ಹೆಸರುಗಳು ಹುಟ್ಟಿಕೊಂಡವು. ಆ ವಾಸ್ತವ್ಯಗಳೇ ಊರು, ಗುಡಿಸಲು, ಕೇರಿ–ಕಟ್ಟೆ, ಕೆರೆ, ಬಾವಿ, ಹಳ್ಳ. ನೆಲ–ಜಲ, ಗುಂಡಿ, ತೋಟ–ಗದ್ದೆ, ಹಳ್ಳಿ, ಒಳ್ಳಿ, ಪಳ್ಳಿ, ಪಲ್ಲೆ, ಪುರಾ, ಗುಂಡಿ, ಹಟ್ಟಿ, ನಗರ, ಮಠ, ಕಾವಲು, ಹುಂಡಿ, ಪುರಿ, ವಲ್ಲಿ, ಬೈಲು ಇನ್ನೂ ಮುಂತಾದವುಗಳು. ಸ್ಥಳನಾಮದ ಉಗಮದ ಹಂತಗಳನ್ನು ಪರಿಶೀಲಿಸಿದಾಗ ಪ್ರಾಕೃತಿಕ ಅಂಶಗಳಲ್ಲಿ ನದಿ, ಕೆರೆ, ಕೊಳ ಸರೋವರ, ಬೆಟ್ಟ–ಗುಡ್ಡ, ಅರಣ್ಯ, ಕಲ್ಲು, ಬಂಡೆ, ವೃಕ್ಷ, ಪ್ರಾಣಿಗಳು.

ಸಾಂಸ್ಕೃತಿಕವಾಗಿ ವೃತ್ತಿಗಳ ಆಧಾರದ ಮೇಲೆ ಬಡಗಿ, ಕಮ್ಮಾರ, ಸಿಂಪಲ್ಲಾಗಿ ದರ್ಜಿ, ಚಮ್ಮಾರ ಮಡಿವಾಳ, ಒಕ್ಕಲಿಗ, ಜನಪದೀಯ ಐಕ್ಯ ಪುರಾಣ, ಜನಪದ ಕಥೆಗಳು, ನಿರುಕ್ತಿಗಳು, ಜಾಗ ಚಾರಿತ್ರಿಕ ಅಂಶಗಳು, ರಾಜ ಮನೆತನಗಳು ಪಾಳೇಗಾರಿಕೆ ಅಧಿಪತ್ಯ ಜಹಾಗೀರು, ಆಧುನಿಕ ಅಂಶಗಳು ರಾಜಕೀಯ, ಸಂಗೀತ, ಕಲೆ, ಸಾಹಿತ್ಯ ಮತ್ತು ಪ್ರಶಸ್ತಿ ಭೌಗೋಳಿಕ ವೈಪರೀತ್ಯಗಳು ಯುದ್ಧ, ಪ್ರವಾಹ, ಭೂಕಂಪ ಇತ್ಯಾದಿಗಳಾಗಿವೆ.

ಸಾಧು–ಸಂತರಿಂದ ಯಜ್ಞ ಬ್ರಹ್ಮಚಾರಿಯ ಸಂಘಟನೆ, ಬೋಧನೆ, ಸಾಧನೆ ಮತ್ತು ಹೋರಾಟ ವರ್ಗ, ಹೋರಾಟ ಸ್ವಾತಂತ್ರ್ಯ, ಹೋರಾಟ ಶಿಕ್ಷಣ ಮತ್ತು ವೃತ್ತಿ ಶೈಕ್ಷಣಿಕ ಕಾರ್ಯನಿಮಿತ್ತ ಹೆಸರು ಪಡೆದುಕೊಳ್ಳುವ ವಿದ್ಯಾರ್ಜನೆಯ ಸ್ಥಳನಾಮ, ಊರು, ಪಟ್ಟಣ, ನಗರ ಹೀಗೆ ಒಂದೊಂದು ಅಂಶಗಳು ಜನ್ಮ ತಳೆಯುವ ಸ್ಥಳನಾಮಗಳನ್ನು ನೋಡಬಹುದು.

ಪ್ರಕೃತಿಯಲ್ಲಿ ಕೆಲವು ವಸ್ತುಗಳು ಹೆಸರುಗಳನ್ನು ಕಾಣಬಹುದು. ಕಲ್ಲು–ಕಲ್ಲೂರು, ಕಲ್ಲಾರಿ, ಅರಕೆರೆ, ಬಣಕಲ್ಲು, ಕಾಲವೇ, ದೊಡ್ಡ ಕಾಲುವೆ, ಕಡಲೂರು, ಕಾಲುವಳ್ಳಿ, ಕುಂದ–ನೀರ್ಕುಂದ, ಕುಂದೂರು, ದೊಡ್ಡಕುಂದ, ಉಕ್ಕುಂದ, ಕೊಳ–ಶ್ರವಣಬೆಳಗೊಳ, ಕೊಂಡುಗೋಳ, ಚಿಕ್ಕೋಳ, ಗುಂದ–ಹನಗುಂದ, ಹುಲಗುಂದ, ಕೆರೆ–ಕಿಕ್ಕೆರೆ, ಹೊಸಕೆರೆ, ಆಲ್ ಗೆರೆ, ಬೈರ್ಗೆರೆ. ಬಂಡೆ; ಗುಡಿಬಂಡೆ, ಸಮುದ್ರಮ್, ಸಮುದ್ರವಳ್ಳಿ, ಆಕ್ಕಸಂದ್ರ ಇನ್ನೂ ಮುಂತಾದ ಅಂಶಗಳನ್ನು ಕಾಣಬಹುದು. ವೃಕ್ಷಗಳ ಹೆಸರಿನಲ್ಲಿ; ಭಾಗೆ–ಬಾಗೇಪಲ್ಲಿ, ಬಾಗ್ಯವಾಲು, ಭಾಗನಹಳ್ಳಿ, ನಲ್ಲೂ–ನಲ್ಲೂರು, ನಲ್ಲಕೆ, ನಲ್ಲುಲ್ಲಿ, ಸಂಪಿಗೆ–ಸಂಪಿಗೆಹಳ್ಳಿ, ಚಂಪಕನಗರ, ಕಬ್ಬು–ಕಬ್ಬೂರು, ಕಬ್ಬಿನಹಳ್ಳಿ, ಶುಂಠಿ–ಶುಂಠಿ ಕೊಪ್ಪಳ್ಳಿ, ಸೀಗೆ–ಸೀಗೆಹಳ್ಳಿ, ಸೀಗನಗುಡ್ಡ, ಸೀಗೂರು.

ಪ್ರಾಣಿ; ಆನೆ–ಆನೆಘಟ್ಟ, ಅಸ್ತಿಪುರ, ಆಮೆ–ಆಮೆಪಳ್ಳ, ಎತ್ತು–ಎತ್ತುಗೂರು, ಚಿರತೆ–ಚಿರತಪಲ್ಲಿ ಚಿರತೆಯೂರು, ಹುಲಿ–ಹುಲಿಯೂರು ಟಿಪ್ಪು, ಹುಲಿಯೂರು ದುರ್ಗ, ಹಸು–ದುರ್ಗನಹಳ್ಳಿ, ತುರುವನೂರು ತುರುವೇಕೆರೆ, ನವಿಲು–ನವಿಲೂರು ಮುಂತಾದವುಗಳನ್ನು ಕಾಣಬಹುದಾಗಿದೆ. ಸಾಂಸ್ಕೃತಿಕವಾಗಿ ವೃತ್ತಿಗಳ ಆಧಾರದ ಮೇಲೆ ಬಡಗಿ–ಬಡಿಕಿ ಕೊಪ್ಪಲು, ಬಡಿಗೇಹಳ್ಳಿಪುರ, ಕಮ್ಮಾರ– ಕಮ್ಮಾರನ ಕೊಪ್ಪಲು ಮಡಿವಾಳ–ಮಡಿವಾಳಪುರ, ಮಡಿವಾಳನೂರು. ಧಾರ್ಮಿಕ ಅಂಶಗಳು; ಜೈನ–ಜೈನರಹಳ್ಳಿ, ಬಸ್ತಿಹಳ್ಳಿ, ಬೌದ್ಧಗುಹೆ–ಬೌದ್ಧಪುರ, ಶೈವ–ಶಿವಪುರ, ಶಿವನಹಳ್ಳಿ, ಶಿವಗಂಗೆ.

ಜನಪದೀಯ ಐತಿಹ್ಯ; ರಾಮನಹಳ್ಳಿ, ಹನುಮಂತನಗರ, ಕುಂತಿ ಮನೆ, ಲಕ್ಷ್ಮಣ ತೀರ್ಥ, ಪುರಾಣಗಳು; ಅರ್ಜುನಹಳ್ಳಿ, ಅರ್ಕಪುರ, ಅಗ್ರಹಾರ, ಜನಪದ ಕಥೆಗಳು; ಕುಂತಿಗುಟ್ಟ, ಪಾಂಡುಪುರ,

ನಾರದನಹಳ್ಳಿ. ಚಾರಿತ್ರಿಕಾಂಶಗಳು ರಾಜ ಮನೆತನಗಳು; ಚಾಮರಾಜನಗರ, ಕೃಷ್ಣರಾಜನಗರ, ಕೃಷ್ಣರಾಜಪೇಟೆ, ಸುಲ್ತಾನಪೇಟೆ, ಗಜಿಯಾಬಾದ್, ಹೈದರ್ ನಗರ. ಆಧುನಿಕ ಅಂಶಗಳು ರಾಜಕೀಯ ನಿಜಲಿಂಗಪ್ಪ ಬಡಾವಣೆ, ಇಂದಿರಾನಗರ, ನೆಹರು ನಗರ, ಗಾಂಧಿನಗರ. ಸಂಗೀತ–ಸಂಗೀತಪುರ, ಬಿದರನಹಳ್ಳಿ, ಕಲೆ ವೀಣೆಶೇಷಣ್ಣ ರಸ್ತೆ, ಶೇಷಾದ್ರಿಗವಾಯಿ ಬಡಾವಣೆ,

ಭೌಗೋಳಿಕ ವೈಪರಿತ್ಯಗಳು ಯುದ್ಧಗಳಲ್ಲಿ ಪಾಣಿಪತ್ ಕದನ, ಬಕ್ಸರ್ ಕದನ, ಪ್ಲಾಸಿ ಕದನಗಳು ಭೂಕಂಪಗಳು, ಕಿಲಾರಿ ಲಾತೂರು ಶಿಕ್ಷಣ, ವಿದ್ಯಾನಗರ, ಸರಸ್ವತಿಪುರಂ, ಮಾನಸಗಂಗೋತ್ರಿ, ಹೇಮಗಂಗೋತ್ರಿ ಈ ರೀತಿಯ ಸ್ಥಳನಾಮಗಳಲ್ಲಿ ಅನೇಕ ಬಗೆಯ ವೈಜ್ಞಾನಿಕ ಸತ್ಯಗಳು ಕಂಡುಬರುತ್ತವೆ. ಸ್ಥಳನಾಮಗಳು ಏಕೆ ಹುಟ್ಟುತ್ತವೆ? ಒಂದೊಂದು ಸ್ಥಳಕ್ಕೆ ನಿರ್ದಿಷ್ಟವಾದ ಹೆಸರು ಬರಲು ಕಾರಣವೇನು? ಭೌಗೋಳಿಕ, ಧಾರ್ಮಿಕ, ಜನಪದೀಯ, ಐತಿಹಾಸಿಕ, ಪ್ರಾಕೃತಿಕ, ಸಾಂಸ್ಕೃತಿಕ ಅಂಶಗಳು ಹೇಗೆ ಪ್ರಭಾವ ಬೀರುತ್ತವೆ? ಎಂಬುದು ತಿಳಿದು ಬರುತ್ತದೆ. ಈ ಹಿನ್ನಲೆಯಲ್ಲಿ ಕೋಲಾರ ಜಿಲ್ಲೆಯ ಹಲವು ತಾಲೂಕು ಕೇಂದ್ರಗಳ ನಿಷ್ಪತ್ತಿ ಮಾಡಲಾಗಿದೆ ಎಂದರೆ ಮೇಲಿನ ಚಾರಿತ್ರಿಕ ಹೆಸರುಗಳನ್ನು ಗಮನಿಸಿದರೆ ಕಾಣುವ ಅಂಶವೇನೆಂದರೆ ರಾಜರುಗಳು, ನಾಯಕರು ತಮ್ಮ ಅಧಿಕಾರ ಪ್ರಭಾವದಿಂದ ಆಳ್ವಿಕೆ ನಡೆಸಿ ಹೆಸರುಗಳನ್ನು ಬದಲಿಸಿ ಹೊಸ ಪ್ರತಿನಾಮ ನೀಡುತ್ತಿರುವುದು ಕಂಡುಬರುವುದು. ಇತ್ತೀಚೆಗೆ ಬೆಂಗಳೂರು ನಗರವು ಸೇರಿದಂತೆ ಪ್ರಾಚೀನ ಹೆಸರುಗಳನ್ನು ಅಳಿಸಿ ಹೊಸ ಹೆಸರುಗಳನ್ನು ನಾಮಕರಣ ಮಾಡುವುದು ಆಡಳಿತದಲ್ಲಿ ಬೆಳೆದು ಬಂದ ಸಂಪ್ರದಾಯವಾಗಿ ಕಾಣುತ್ತದೆ. ಹಾಗೆ ಸ್ಥಳನಾಮ ಎಲ್ಲಾ ಗ್ರಾಮ, ಪಟ್ಟಣ, ನಗರಗಳಲ್ಲಿ ಕಾಲ ಕಳೆದಂತೆ ಬದಲಾಗಿರುವ ಕುರುಹುಗಳಾಗಿ ಕಾಣುತ್ತವೆ. ಇನ್ನು ಕೆಲವು ಕಡೆ ಪ್ರತಿಯಾಗಿ ನೀಡಿದ ಹೊಸ ಹೆಸರುಗಳು ಕಾಲ ಕಳೆದರೂ ಬದಲಾಗದೆ ಹಾಗೆ ಉಳಿದ ಕುರುಹುಗಳಾಗಿ ಕಾಣುತ್ತವೆ.

ಗ್ರಾಮಕ್ಕೆ ಕೃಷ್ಣದೇವರಾಯನ ಕಾಲದಲ್ಲಿ ಅರಸಿ ತಿರುಮಲಾಂಬ ಹೆಸರಿನಲ್ಲಿ ತಿರುಮಲಾಂಬಪುರ ಪ್ರತಿನಾಮ ನೀಡಿದ ವಿಷಯ ಶಾಸನಗಳಲ್ಲಿ ಉಲ್ಲೇಖವಾಗಿರುವುದು. ಅದೇ ಸಮಯದಲ್ಲಿ ಒರಿಸ್ಸಾದ ಗಜಪತಿಯ ಮೇಲೆ ಕೃಷ್ಣದೇವರಾಯನ ದಂಡೆತ್ತಿ ಹೋಗಿ ಜಯಿಸಿದಾಗ ಹಾಸನ ಬಳಿ ಬೀಡುಬಿಟ್ಟು ಗೊಂಡನಹಳ್ಳಿಗೆ ಪ್ರತಿನಾಮವಾಗಿ ಧನಂಜಯ ಗ್ರಾಮ ಎಂಬ ಹೆಸರು ಇಟ್ಟು ವ್ಯಕ್ತಿ ಒಬ್ಬನಿಗೆ ನೀಡಿದ ವಿಷಯ ಹಾಸನದ ಶಾಸನ ಒಂದರಲ್ಲಿ ದೊರೆಯುತ್ತದೆ. ಇಲ್ಲಿ ನಾವು ಗಮನಿಸಬೇಕಾದ ಅಂಶವೇನೆಂದರೆ ಸಂಸ್ಕೃತಿಕರಣದ ಫಲವಾಗಿ ನೀಡಿದ ಹೆಸರುಗಳನ್ನು ಜನರು ಉಳಿಸಿ ಬೆಳೆಸಿಲ್ಲ ಜನಪದವಾಗಿ ಬದಲಾಗದಿದ್ದರೂ ಸ್ವೀಕರಿಸಿದ್ದಾರೆ. ಇಲ್ಲವಾದರೆ ಹಳೆಯ ನಾಮಧೇಯಗಳ ಕಡೆ ಮರಳಿದ್ದಾರೆ. ಈಗ ಜಾಗತಿಕ ಅಂಶಗಳನ್ನು ಹಿಡಿದು ಸ್ಥಳನಾಮ ಅಧ್ಯಯನ ಸಾಗುತ್ತಾ ಹಳ್ಳಿಯಿಂದ–ಹಳ್ಳಿಗೆ, ಸ್ಥಳದಿಂದ–ಸ್ಥಳಕ್ಕೆ ಹರಿದಾಡುತ್ತದೆ.

**ಪರಾಮರ್ಶನ ಗ್ರಂಥಗಳು**


- ಎಫಿಗ್ರಾಫಿಯಾ ಕರ್ನಾಟಿಕಾ. (2016). ಸಂಪುಟ ಎರಡು ಮೈಸೂರು ವಿಶ್ವವಿದ್ಯಾಲಯ, ಮೈಸೂರು.

- ಎಫಿಗ್ರಾಫಿಯಾ ಕರ್ನಾಟಿಕಾ. (2015). ಸಂಪುಟ 10 ಮೈಸೂರು ವಿಶ್ವವಿದ್ಯಾಲಯ, ಮೈಸೂರು.
- ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ–3, 2011. (ಬೆಂಗಳೂರು).
- ಎಫಿಗ್ರಾಫಿಯಾ ಕರ್ನಾಟಿಕಾ. (2015). ಸಂಪುಟ 8 ಮೈಸೂರು ವಿಶ್ವವಿದ್ಯಾಲಯ, ಮೈಸೂರು.
- ಕನ್ನಡ ವಿಷಯ ವಿಶ್ವಕೋಶ. (2006) ಮೈಸೂರು ವಿಶ್ವವಿದ್ಯಾಲಯ, ಮೈಸೂರು.
- ಸಿರಿನಂದಿ. (1999). ಕೋಲಾರ ಜಿಲ್ಲಾ ಸ್ಮರಣಾ ಸಂಚಿಕೆ, ಚಿಕ್ಕಬಳ್ಳಾಪುರ ದೇವರಾಜಯ್ಯ, ಕೋಲಾರ.
- ಕೋಲಾರ ಜಿಲ್ಲಾ ಗೆಜೆಟಿಯರ್. 2005) ಚಿತ್ರಂಜನ್, ಕನ್ನಡ–ಕೋಲಾರ ಜಿಲ್ಲಾ ಗ್ಯಾಜೆಟಿಯರ್, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಕೋಲಾರ.
- ಮುನಿರಾಜು ಎಂ. (2019). ಭಾರತದ ಸಾಂಸ್ಕೃತಿಕ ಸ್ಥಿತ್ಯಂತರಗಳು. (ಮುಳಬಾಗಿಲು).